ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಈ ಪರಿಸ್ಥಿತಿ ಕೇವಲ ಶಿರ್ವಾದಲ್ಲಿರುವ ಆಸ್ಪತ್ರೆಯಲ್ಲೇ ಅಲ್ಲ, ಇಡೀ ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಯವರು ನಡೆಸುತ್ತಿದ್ದಂತಹ ಆಸ್ಪತ್ರೆಗಳನ್ನು ಸರ್ಕಾರ ವಹಿಸಿಕೊಂಡ ಮೇಲೆ ಈ ರೀತಿಯ ಪರಿಸ್ಥಿತಿ ಎಲ್ಲಕಡೆ ಇದೆ. 1979 ಹಾಗೂ 1981ರಲ್ಲಿ ಸರ್ಕಾರ ಆ ರೀತಿಯ ತೀರ್ಮಾನವನ್ನು ತೆಗೆದುಕೊಂಡಿದೆ. ಅಲ್ಲಿರತಕ್ಕಂತಹ ವೈದ್ಯಾಧಿಕಾರಿಗಳು ಮತ್ತೆ ಅಲ್ಲಿರತಕ್ಕ ಇತರೇ ಸಿಬ್ಬಂದಿ ವರ್ಗ ಅವರ ಸಂಬಳ ಸಾರಿಗೆ ಇತರ ಭತ್ಯಗಳ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಆದಕಾರಣ ಈ ರೀತಿಯ ಆಸ್ಪತ್ರೆಗಳ ಪರಿಸ್ಥಿತಿ ಸರಿಇಲ್ಲ. ಜೂನ್ ತಿಂಗಳೊಳಗೆ ಸ್ಥಳೀಯ ಸಂಸ್ಥೆಗಳು ನಡೆಸುತ್ತಿದ್ದಂತಹ ಆಸ್ಪತ್ರೆಗಳಲ್ಲಿ ಕೆಲಸಮಾಡುತ್ತಿರತಕ್ಕಂತಹ ವೈದ್ಯಾಧಿಕಾರಿಗಳು ಹಾಗೂ ಅಲ್ಲಿರತಕ್ಕಂತಹ ಸಿಬ್ಬಂದಿವರ್ಗದವರಿಗೆ ಕೊಡಬೇಕಾಗಿರುವಂತಹ ಸಂಬಳ ಸಾರಿಗೆ, ಬಡ್ತಿ, ಹಾಗೂ ನಿವೃತ್ತಿ ವೇತನದ ಬಗ್ಗೆ ಜೂನ್ 30 ರೊಳಗಾಗಿ ಕ್ರಮತೆಗೆದುಕೊಳ್ಳಬೇಕೆಂದು ಸರ್ಕಾರ ನಿರ್ಣಯ ಮಾಡಿದೆ.

ಆ ದೃಷ್ಟಿಯಿಂದ ಡಾ. ಆಚಾರ್ಯ ಅವರು ಹೇಳಿದ ಸಮಸ್ಯೆ ಪರಿಹಾರವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಶಿರ್ವಾಕ್ಕೆ ಸಂಬಂಧಪಟ್ಟ ಸಮಸ್ಯೆ ಏನಿದೆ ಅದರ ಬಗ್ಗೆ ಸದಸ್ಯರು ಸ್ಪೆಸಿಫಿಕ್ ಆಗಿ ತಿಳಿಸಿದರೆ ಕ್ರಮ ತೆಗೆದುಕೊಳ್ಳುತ್ತೇನೆ. 3-30 p.m.

8. Fire accident in Lambani Thanda, Kandakeri village, Aurad Taluk.

ಶ್ರೀ ಬಿ. ಶಿವಣ್ಣ (ದೇವದುರ್ಗ).— ಸನ್ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಕಂದಕೇರಿ ಗ್ರಾಮದ ಸಮೀಪದಲ್ಲಿರುವ ಲಂಬಾಣಿ ತಾಂಡಾದಲ್ಲಿ ಆಕಸ್ಮಿಕವಾಗಿ ಬೆಂಕಿ ಅನಾಹುತವಾಗಿರುವ ಬಗ್ಗೆ ಕಂದಾಯ ಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ.

ಶ್ರೀ ವಿ. ಎಲ್. ಪಾಟೀಲ್. (ಕಂದಾಯ ಮಂತ್ರಿಗಳು).— ಮಾನ್ಯ ಅಧ್ಯಕ್ಷರೆ, ಸದರಿ ವಿಚಾರದ ಬಗ್ಗೆ ನಾನು ಈ ಹೇಳಿಕೆಯನ್ನು ಮಾಡಬಯಸುತ್ತೇನೆ:

ದಿನಾಂಕ 18ನೇ ಫೆಬ್ರವರಿ 1984ರಂದು ಮಧ್ಯಾಹ್ನ 2-30 ಗಂಟೆಗೆ, ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಕಂದಕೇರಿ ಗ್ರಾಮದ ಸಮೀಪದಲ್ಲಿರುವ ಲಂಬಾಣಿ ಮತಿರಾಮ ತಾಂಡದಲ್ಲಿ ಆಕಸ್ಮಿಕ ಬೆಂಕಿ ಅನಾಹುತ ಘಟಿಸಿತು. ಹದಿನಾಲ್ಕು ಕುಟುಂಬಗಳು ಈ ಅನಾಹುತಕ್ಕೆ ಒಳಪಟ್ಟವು. 4 ವರ್ಷದ ಒಂದು ಕೂಸು ಈ ಅನಾಹುತದಲ್ಲಿ ಮೃತಪಟ್ಟಿರುವುದು. ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ತಾತ್ಕಾಲಿಕವಾಗಿ ವಸತಿ ಸೌಕರ್ಯವನ್ನು ಒದಗಿಸಿ ನೊಂದ ಸಂತ್ರಸ್ತರಿಗೆ ತಕ್ಷಣ ಪರಿಹಾರವನ್ನು ಒದಗಿಸಲಾಗಿದ್ದು ಅಕ್ಕಿ, ಜೋಳ, ಬೇಳೆಕಾಳುಗಳು, ಎಣ್ಣೆ ಇತ್ಯಾದಿ ಆಹಾರ ಸಾಮಗ್ರಿಗಳನ್ನು ಒದಗಿಸಲಾಯಿತು. ನೊಂದ ಸಂತ್ರಸ್ತರ ಪ್ರತಿಯೊಬ್ಬರಿಗೆ ಎರಡು ಹಾಸಿಗೆ ಹೊದಿಕೆಗಳನ್ನು ಹಂಚಲಾಯಿತು. ಬೆಂಕಿ ದುರಂತದಲ್ಲಿ ಮಡಿದ ಮಗುವಿನ ತಂದೆಗೆ ರೂ. 500ಗಳನ್ನು ಮಂಜೂರುಮಾಡಲಾಗಿದೆ. ಔರಾದ್ ತಾಲ್ಲೂಕಿನ ವಿಧಾನಸಭಾ ಸದಸ್ಯರಾದ ಶ್ರೀ ಮಾಣಿಕ್‌ರಾವ್ ಪಾಟೀಲ್‌ರವರು ಒದಗಿಸಿದಂತಹ ರೂ. 1500-00ಗಳಲ್ಲಿ ಮೇಲಿನ ಪದಾರ್ಥಗಳನ್ನು ಕೊಂಡು ಒದಗಿಸಲಾಯಿತು.

ಒಟ್ಟು ಹಾನಿಯಾಗಿರುವ ನಷ್ಟದ ಅಂದಾಜು ರೂ. 46,565-00 ಇದೆ. ಎಲ್ಲ 14 ನೊಂದ ಕುಟುಂಬಗಳಿಗೆ ತಲಾ ರೂ. 800-00 ನಗದು ಪರಿಹಾರ ಮತ್ತು ರೂ. 600-00 ವಸತಿ ಸಾಮಗ್ರಿಗಳಿಗೆ ಮಂಜೂರು ಮಾಡಲಾಗಿದೆ, ಈ ರೀತಿ ಒಟ್ಟು ರೂ. 19600-00ಗಳ ಪರಿಹಾರ ಮಂಜೂರು ಮಾಡಲಾಗಿದ್ದು ಮಂಜೂರು ಮಾಡಿದ ಪರಿಹಾರದ ಮೊತ್ತವನ್ನು ಕೆಲ ಸಮಸ್ಯೆಗಳ ಕಾರಣ ತಕ್ಷಣ ನೀಡಲು ಆಗಿಲ್ಲವೆಂದು ಜಿಲ್ಲಾಧಿಕಾರಿ, ಬೀದರ್‌ರವರು ವರದಿಮಾಡಿರುತ್ತಾರೆ. ಇವುಗಳನ್ನು ನಿವಾರಿಸಿ ಆಖೈರಾಗಿ ನೊಂದ ಸಂತ್ರಸ್ತರಿಗೆ ದಿನಾಂಕ 24-3-1984ರಂದು ಜಿಲ್ಲಾಧಿಕಾರಿಗಳು ಪರಿಹಾರ ಧನವನ್ನು ಪೂರ್ತಿ ಪಾವತಿ ಮಾಡಿರುತ್ತಾರೆ. ಈ ಪ್ರಕರಣದಲ್ಲಿ ಪರಿಹಾರ ಕೊಡುವಲ್ಲಿ ಆದ ತಪ್ಪಿಸಬಹುದಾಗಿದ್ದ ವಿಳಂಬವನ್ನು ನಾನು ಗಮನಿಸಿ ಇನ್ನುಮುಂದೆ ಇಂತಹ ಪ್ರಕರಣಗಳಲ್ಲಿ ಈ ತರಹ ವಿಳಂಬವಾಗದಂತೆ ನೋಡಿಕೊಳ್ಳಲು ಸೂಕ್ತಕ್ರಮವನ್ನು ಕೈಕೊಳ್ಳುವ ಬಗ್ಗೆ ಪರಿಶೀಲಿಸುತ್ತಿದ್ದೇನೆ.

ಇಲ್ಲಿ ನೊಂದ ಸಂತ್ರಸ್ತರಿಗೆ ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಇನ್ನೂ ಹೆಚ್ಚಿನ ಪರಿಹಾರ ನೀಡುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಬಿ. ಶಿವಣ್ಣ.— ಅದು ಆಕಸ್ಮಿಕ ಬೆಂಕಿ ಅನಾಹುತ ಎಂದು ಮಂತ್ರಿಗಳು ಹೇಳಿದರು. ಅದು ಹೇಗೆ ಆಯಿತು ? ತಮ್ಮಲ್ಲಿ ಅದರ ಬಗ್ಗೆ ಮಾಹಿತಿ ಇದೆಯೆ ? ಅಪಘಾತಗಳು ನಾನಾ ರೀತಿಯಲ್ಲಿ ಆಗುತ್ತವೆ. ಕೆಲವರು ಮನೆಗೆ ಬೆಂಕಿ ಹಚ್ಚುತ್ತಾರೆ, ಒಬ್ಬರಿಗೊಬ್ಬರು ಜಗಳಮಾಡುತ್ತಾ ಬೆಂಕಿಹಚ್ಚುತ್ತಾರೆ, ಬೀಡಿ ಸೇದುತ್ತಾ, ಶೇದಿದ ಬೀಡಿಯ ತುಂಡನ್ನು ಆರಿಸದೆ ಎಸೆದಾಗ ಬೆಂಕಿ ಆಗುತ್ತದೆ. 18 ನೆಯ ಫೆಬ್ರವರಿಯಲ್ಲಿ ಈ ಘಟನೆ ನಡೆದಿದೆ. ಮಾರ್ಚಿ ಒಂದರವರೆಗೆ ಜಿಲ್ಲಾಧಿಕಾರಿಗಳಾಗಲೀ, ಸ್ಥಳೀಯ ಅಧಿಕಾರಿಗಳಾಗಲೀ ಇದರ ಬಗ್ಗೆ ಕ್ರಮತೆಗೆದುಕೊಂಡಿಲ್ಲ. ನಾವು ಹೇಗೆ ಪ್ರಶ್ನೆ ಕೇಳಿದ್ದೆವೋ ಅದೇ ಪ್ರಕಾರ ಉತ್ತರ ಇದೆ. ತಾವು ಅಸೆಂಬ್ಲಿಯಲ್ಲಿ ಉತ್ತರಕೊಡುವಾಗ ಯಾವರೀತಿ ಬೆಂಕಿ ಅಪಘಾತವಾಯಿತು,

ಅದಕ್ಕೆ ಕಾರಣರು ಯಾರು ಎಂಬ ಬಗ್ಗೆ ಎಲ್ಲಾ ಮಾಹಿತಿಗಳನ್ನು ಸಂಗ್ರಹಿಸಿ ಉತ್ತರಕೊಡಬೇಕಾಗಿತ್ತು, ನಿಮ್ಮ ಹತ್ತಿರ ಈ ಎಲ್ಲ ಮಾಹಿತಿಗಳು ಇಲ್ಲವೆಂದರೆ ನಿಮಗೆ ಸಂಗ್ರಹ ಮಾಡುವುದಕ್ಕಾಗಿಲ್ಲವೆಂದು ನಾನು ಹೇಳಬೇಕಾಗುತ್ತದೆ. ಇದುವರೆಗೆ ಜಿಲ್ಲಾಧಿಕಾರಿಗಳಾಗಲೀ ಯಾರೇ ಆಗಲಿ ಅಪಘಾತಕ್ಕೊಳಗಾದ ಕುಟುಂಬದವರಿಗೆ ಪರಿಹಾರ ಕೊಟ್ಟಿಲ್ಲ. ಆಂದಾಗ ಅವರು ಯಾವರೀತಿ ಜೀವನ ಮಾಡಬೇಕು ? ಈಗ ನೀವು 500 ರೂಪಾಯಿಗಳ ಪರಿಹಾರವನ್ನೇನು ಕೊಡುತ್ತಿದ್ದೇವೆಂದು ಹೇಳಿದ್ದೀರಿ ಆದನ್ನು ಸ್ವಲ್ಪ ಹೆಚ್ಚು ಮಾಡಿ. ಜೊತೆಗೆ ಅವರಿಗೆ ಜನತಾ ಮನೆಗಳನ್ನು ಕಟ್ಟಿಸಿಕೊಟ್ಟರೆ ಒಳ್ಳೆಯದು.

ಶ್ರೀ ವಿ. ಎಲ್. ಪಾಟೀಲ್ : ಸುಮಾರು ಮಧ್ಯಾಹ್ನ ಎರಡೂವರೆಗಂಟೆ ಸಮಯದಲ್ಲಿ ಈ ಬಿಂಕೆ ಅಪಘಾತವಾಗಿದೇ ಅದಕ್ಕೆ ಪರಿಹಾರ ಕೊಡುತ್ತಿದ್ದೇವೆ, ಸದಸ್ಯರು ಸೂಚಿಸಿದ ಪ್ರಕಾರ ವಿಚಾರವನ್ನು ಪರಿಶೀಲನೆ ಮಾಡಿ ಜನತಾ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

Official Resolution

Sub : Third Revision Settlement Report of Raichur and Gangavathi Zones

Sri V. L. Patil (Minister for Revenue).—Sir,
I beg to move :

"That this House hereby approves the Third Revision Settlement Reports in respect of Raichur and Gangavathi zones comprising of Raichur, Deodurg and Gangavathi taluks of Raichur district which were liad before this House on 20th February, 1984"

The Question was proposed

ಡಾ॥ ವಿ. ಎಸ್. ಆಚಾರ್ಯ.—ರಾಯಚೂರು ಜಿಲ್ಲೆಗೆ ಸಂಬಂಧಪಟ್ಟ ಒಂದು ವಿಚಾರವನ್ನು ಕಂದಾಯ ಸಚಿವರ ಗಮನಕ್ಕೆ ತರಬೇಕಾಗಿದೆ. ಈ ಸದನದ ಜನವರಿ 17ಕ್ಕೆ ಪ್ರಾರಂಭವಾದನಂತರ ಸುಮಾರು 10–15 ತಾಲ್ಲೂಕುಗಳಲ್ಲಿ ಬೆಳೆ ನಷ್ಟವಾಗಿದೆ. ಆ ಬಗ್ಗೆ ಕಂದಾಯ ಪ್ರಸ್ತಾವನೆಯನ್ನು ಸಭೆಯ ಮುಂದಿಡುತ್ತಾ ಬಂದಿದ್ದಾರೆ. ಈ ಸಂದರ್ಭವನ್ನು ಉಪಯೋಗಿಸಿಕೊಂಡು ನಾನು ಕೇಳ ಬಯಸುವುದೇನೆಂದರೆ ಸೇಡಂ ತಾಲ್ಲೂಕಿನಲ್ಲಿ ....

ಉಪಾಧ್ಯಕ್ಷರು.—ಇದು ಸೆಟ್ಲ್‌ಮೆಂಟ್ ರಿಪೋರ್ಟ್ ಇದರ ಬಗ್ಗೆ ಅವರು ಏನು ಹೇಳುತ್ತಾರೆ ನೋಡೋಣ.

ಡಾ॥ ವಿ. ಎಸ್. ಆಚಾರ್ಯ.—ಸಭೆಯಲ್ಲಿ ಅವರು ಸಿಗುವುದು ಕಷ್ಟ. ಆದ್ದರಿಂದ ಸೇಡಂ ತಾಲ್ಲೂಕಿನಲ್ಲಿ ಅತಿವೃಷ್ಟಿಯಾಗಿ ಬಹಳ ನಷ್ಟವಾಗಿದೆ ; ಅಲ್ಲಿ ಕಂದಾಯ ಮನ್ನಾ ಮಾಡಬೇಕಾಗಿದೆ. ಇದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ. ವಿ. ಎಲ್. ಪಾಟೀಲ್.—1965ರಲ್ಲಿ ಸರ್ವೆ ಆಗದ್ದು ; ಇನ್ನೂ 3 ತಾಲ್ಲೂಕಿನದು ಆಗಿಲ್ಲ. ಇದು ಬೇರೆ ವಿಚಾರ.

Mr. Deputy Speaker.—The question is :

"That this House hereby approves the Third Revision Settlement Reports in respect of Gangavathi and Raichur zones comprising of Raichur, Deodurg and Gangavathi taluks of Raichur District which were laid before this House on 20th February 1984"

The Resolution was adopted

Legislative Business

The Mysore (Religious and Charitable(Inams Abolition) Karnataka Amendment) Bill 1984

(Leave to introduced)

Sri V. L. Patil (Minister for Revenue).—Sir I beg to move :